بسم الله الرحمن الرحيم

# ಸ್ವದಖಃ; ಮಹತ್ವ ಮತ್ತು ಶ್ರೇಷ್ಠತೆ فضل الصدقة

ಸಂಪತ್ತು ಎಂಬುವುದು ಅಲ್ಲಾಹನ ಅನುಗ್ರವಾಗಿದೆ. ಅದನ್ನು ಅವನು ಉದ್ದೇಶಿಸುವವರಿಗೆ ಅಗಣಿತವಾಗಿ ನೀಡುವನು. ದೈವಿಕ ಅನುಗ್ರಹವಾದ ಸಂಪತ್ತನ್ನು ಅವನ ನಿಯಮಗಳಿಗೆ ವಿಧೇಯರಾಗಿ ಕೊಂಡು ಸಂಪಾದಿಸಬೇಕು ಮತ್ತು ಖರ್ಚು ಮಾಡಬೇಕು. ಅಲ್ಲಾಹನ ತೃಪ್ತಿಯನ್ನು ಗಳಿಸುವುದಾಗಿರಬೇಕು ಅದರ ಮೂಲಕ ನಮ್ಮ ಮುಖ್ಯ ಲಕ್ಷ್ಯ. ಖುರ್‌ಆನ್ ಹೇಳುತ್ತದೆ:

الذين ينفقُونَ أموالهم بِالليل والنهار سرا وعلانيةً فلهم أجرهم عند ربهم ولا خوف عليهم ولا هم يحزنونَ

“ಹಗಲು ಮತ್ತು ರಾತ್ರಿ ಗೋಪ್ಯವಾಗಿ ಮತ್ತು ಬಹಿರಂಗವಾಗಿ ತಮ್ಮ ಸಂಪತ್ತನ್ನು ವ್ಯಯಿಸುವವರಿಗೆ ಅವರ ಪ್ರಭುವಿನ ಬಳಿ ಅರ್ಹ ಪ್ರತಿಫಲವಿದೆ. ಅವರು ಏನನ್ನೂ ಭಯಪಡಬೇಕಾಗಿಲ್ಲ ಮತ್ತು ಅವರು ದುಃಖಿಸಬೇಕಾಗಿಯೂ ಬರದು.”(ಅಲ್ ಬಖರ: 274)

ಸ್ವದಖಗಳಿಗೆ ಅತ್ಯಧಿಕ ಪ್ರತಿಫಲವು ಲಭಿಸುವುದು. ಅವುಗಳಲ್ಲಿ ಕೆಲವನ್ನು ಈ ಕೆಳಗೆ ವಿವರಿಸುತ್ತೇನೆ.

ಪಾಪಗಳನ್ನು ಅಳಿಸಿ ಬಿಡಲಾಗುವುದು

ಸ್ವದಖಗಳನ್ನು ನೀಡುವ ಮೂಲಕ ಪಾಪಗಳು ಅಳಿಸಿ ಬಿಡಲ್ಪಡುವುದು ಮತ್ತು ಕ್ಷಮಿಸಲ್ಪಪಡುವುದು. ಅಲ್ಲಾಹನು ನುಡಿಯುತ್ತಾನೆ:

إنْ تقْرضوا الله قرضا حسنا يضاعفْه لكُم ويغفر لكُم والله شكُور حليم

“ನೀವು ಅಲ್ಲಾಹುವಿಗೆ ಉತ್ತಮವಾದ ಸಾಲವನ್ನು ನೀಡಿದರೆ ಅವನು ಅದನ್ನು ನಿಮಗೆ ಇಮ್ಮಡಿಗೊಳಿಸಿ ಕೊಡುವನು ಮತ್ತು ನಿಮ್ಮನ್ನು ಕ್ಷಮಿಸುವನು. ಅಲ್ಲಾಹು ಅತ್ಯಧಿಕ ಕೃತಜ್ಞನೂ, ಸಹನಶೀಲನೂ ಆಗಿರುವನು.”(ತಗಾಬುನ್: 17)

ಪ್ರವಾದಿ(ﷺ)ರವರು ನುಡಿದರು:

((عن معاذ ، أن النبي صلى الله عليه وسلم قالَ : سأنبئُك بِأبوابٍ من الْخير الصوم جنةٌ ، والصدقةُ تطفئُ الْخطيئةَ كما يطفئُ الماءُ النار...)) (الترمذي – صححه الألباني)

“ಮುಆದ್(﵁)ರವರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: ಒಳಿತಿನ ಬಾಗಿಲುಗಳನ್ನು ನಾನು ನಿಮಗೆ ತಿಳಿಸಿ ಕೊಡುತ್ತೇನೆ, ವ್ರತ ಗುರಾಣಿಯಾಗಿದೆ, ಸ್ವದಖಗಳು ಪಾಪಗಳನ್ನು ಅಳಿಸಿ ಬಿಡುವುದಾಗಿದೆ. ನೀರು ಬೆಂಕಿಯನ್ನು ಅಳಿಸಿ ಬಿಡುವಂತೆ ” (ತಿರ್ಮಿದಿ)

ಸ್ವದಖ: ಧನವನ್ನು ವೃದ್ಧಿಸುತ್ತದೆ

عن أبِى هريرةَ عن رسول الله -صلى الله عليه وسلم- قالَ « ما نقَصت صدقَةٌ من مالٍ وما زاد الله عبدا بِعفْو إلا عزا وما تواضع أحد لله إلا رفَعه الله ».

“ಅಬೂ ಹುರೈರ(﵁)ರವರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: “ದಾನ–ಧರ್ಮಗಳು, ಯಾವುದೇ ಸಂಪತ್ತನ್ನೂ ಕಡಿತ ಗೊಳಿಸಿಲ್ಲ. ಕ್ಷಮಾದಾನ ನೀಡುವುದರಿಂದ ಅಲ್ಲಾಹನು ಯಾರೊಬ್ಬರಿಗೂ ಪ್ರತಾಪವನ್ನಲ್ಲದೆ ವೃದ್ಧಿಸಿಲ್ಲ. ಅಲ್ಲಾಹನಿಗಾಗಿ ಯಾರಾದರೂ ವಿನಯವನ್ನು ಪ್ರಕಟಿಸಿದರೆ ತನ್ಮೂಲಕ ಅಲ್ಲಾಹನು ಅವನ ಪದವಿಯನ್ನು ಎತ್ತದೆ ಬಿಟ್ಟಿಲ್ಲ.”(ಮುಸ್ಲಿಂ)

ಪರಲೋಕದಲ್ಲಿ ನೆರಳು ಲಭಿಸುವುದು

عقْبةَ بن عامر يقُولُ سمعت رسولَ الله -صلى الله عليه وسلم- يقُولُ :«كُل امرِئٍ فى ظل صدقَته حتى يفْصلَ بين الناس أو قَالَ حتى يحكَم بين الناس» (رواه أحمد – صحيح الألباني)

ಉಖ್‌ಬತ್ ಇಬ್ನ್ ಆಮಿರ್(﵁)ರವರಿಂದ ವರದಿ: ಪ್ರವಾದಿ(ﷺ)ರವರು ಹೇಳುವುದಾಗಿ ನಾನು ಆಲಿಸಿದೆನು. “ಪ್ರತಿಯೊಬ್ಬ ಮನುಷ್ಯನು ಅವನ ಸ್ವದಖದ ನೆರಳಿನಲ್ಲಿರುವನು ಜನರ ನಡುವೆ ಬೇರ್ಪಡುವಿಕೆಯುಂಟಾಗುವ ವರೆಗೆ, ಅಥವಾ ಜನರ ನಡುವೆ ವಿಧಿ ಕಾರ್ಯರೂಪಕ್ಕೆ ಬರುವ ವರೆಗೆ”((ಅಹ್ಮದ್)

ಮುರಿದು ಹೋಗದು

**عن أبي هريرةَ أن رسولَ الله - صلى الله عليه وسلم- قَالَ « إذَا مات الإنسانُ انقطع عنه عملُه إلا من ثَلاثَة إلا من صدقة جارية أو علمٍ ينتفع به أو ولد صالحٍ يدعو له ».**

ಅಬೂ ಹುರೈರ(ﷺ)ರವರಿಂದ ವರದಿ: ರಸೂಲುಲ್ಲಾಹಿ(ﷺ)ರವರು ನುಡಿದರು: ಓರ್ವ ಮನುಷ್ಯನು ಮರಣ ಗೊಂಡರೆ ಮೂರು ಕಾರ್ಯಗಳ ಹೊರತು ಇನ್ನಿತರ ಸರ್ವವೂ ಮುರಿದು ಹೋಗುವುದು. ಒಂದು: ಮುರಿದು ಹೋಗದ ಸ್ವದಖಗಳು(ಸ್ವದಖತುನ್ ಜಾರಿಯ), ಎರಡು: ಉಪಕಾರಪ್ರದವಾದ ಜ್ಞಾನ, ಮೂರು: ಅವನಿಗಾಗಿ ಪ್ರಾರ್ಥಿಸುವ ಸ್ವಾಲಿಹಾದ ಸಂತಾನ"(ಮುಸ್ಲಿಂ)

ಕೋಪದಿಂದ ಸಂರಕ್ಷಣೆ

**عن أبي سعيد الخدري، عن النبي صلى الله عليه وسلم قَالَ: «صدقةُ السر تطفئُ غَضب الرب، وصلةُ الرحم تزيد في العمر...» (تخريج السيوطي تحقيق الألباني – صحيح) رقم: ٣٧٦٠ في صحيح الجامع).**

"ಅಬೂ ಸಈದ್(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: 'ರಹಸ್ಯವಾದ ದಾನ(ಸ್ವದಖ) ರಕ್ಷಕ(ಅಲ್ಲಾಹ)ನ ಕೋಪವನ್ನು ತಣ್ಣಗಾಗಿಸುತ್ತದೆ, ಕುಟುಂಬ ಸಂಬಂಧವನ್ನು ಸೇರಿಸುವುದು ವಯಸ್ಸವನ್ನು ವೃದ್ಧಿಸುತ್ತದೆ"(ಸುಯೂತಿ, ಅಲ್ಬಾನಿ ಸ್ವಹೀಹ್ ಎಂದಿದ್ದಾರೆ)

ಖರ್ಜೂರ ತುಂಡು

ಸ್ವದಖವು ತುಂಬಾ ಮಹತ್ವವಿರುವುದಾಗಿದೆ. ಅದೆಷ್ಟು ಕಿರಿದಾದರೂ ಸರಿಯೆ, ಅಲ್ಲಾಹನ ಬಳಿಯಲ್ಲಿ ಅದು ಹಿರಿದಾದುದಾಗಿದೆ. ಪ್ರವಾದಿ(ﷺ)ರವರು ನುಡಿದರು:

**((عن عدي بن حاتمٍ أن النبي صلى الله عليه وسلم... قَالَ اتقُوا النار ولو بِشق تمرة فَمن لَم يجِد فَبِكلمة طَيبة.)) (متفق عليه)**

"ಅದಿಯ್ಯ್ ಇಬ್ನ್ ಹಾತಿಮ್(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ನುಡಿದರು: ಒಂದು ಖರ್ಜೂರದ ತುಂಡನ್ನು ಕೊಟ್ಟಾದರೂ ನೀವು ನರಕವನ್ನು ಭಯಪಡಿರಿ. ಅದೂ ಲಭಿಸದಿದ್ದರೆ ಉತ್ತಮ ಮಾತಿನ ಮೂಲಕವಾದರೂ (ನೀವು ನರಕವನ್ನು ಭಯಪಡಿರಿ)"(ಬುಖಾರಿ, ಮುಸ್ಲಿಂ)

ಸಂಬಂಧಿಕರಿಗೆ

ಅಲ್ಲಾಹನಿಂದ ಪ್ರತಿಫಲವನ್ನು ಆಗ್ರಹಿಸುತ್ತಾ ಯಾರಾದರೂ ಕುಟುಂಬಕ್ಕೆ ಖರ್ಚು ಮಾಡುವುದಾದರೆ ಅದು ಸ್ವದಖವಾಗಿ ಪರಿಗಣಿಸಲಾಗುವುದೆಂದು ಹದೀಸ್ ನಮ್ಮನ್ನು ಕಲಿಸುತ್ತದೆ. ಮಾತ್ರವಲ್ಲ, ಯಾರಾದರೂ ಕುಟುಂಬಸ್ಥರಿಗೆ ಸ್ವದಖ ನೀಡುವುದಾದರೆ ಅದಕ್ಕೆ ದ್ವಿಪ್ರತಿಫಲವಿದೆಯೆಂದೂ ಪ್ರವಾದಿ(ﷺ)ರವರು ಹೇಳಿದ್ದಾರೆ.

**((عن أبي مسعود الأنصاري عن النبي صلى الله عليه وسلم قَالَ : إذَا أنفق المسلم نفقةً على أهله وهو يحتسِبها كانت له صدقة.)) (بخاري)**

ಅಬೂ ಸಈದ್ ಅಲ್ ಅನ್ಸಾರಿ(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ನುಡಿದರು: "ಓರ್ವ ಮುಸ್ಲಿಂ ತನ್ನ ಕುಟುಂಬಕ್ಕಾಗಿ ಖರ್ಚು ಮಾಡಿ ತನ್ಮೂಲಕ ಪ್ರತಿಫಲವನ್ನು ಆಗ್ರಹಿಸಿದರೆ ಅದು ಅವನಿಗೆ ಸ್ವದಖವಾಗಿದೆ."(ಬುಖಾರಿ)

**((عن سلْمانَ بن عامر الضبي ، قَالَ : قَالَ رسولُ اللهِ صلى الله عليه وسلم : الصدقةُ على المسكين صدقةٌ ، وعلى ذي القَرابة اثْنتان : صدقةٌ , وصلةٌ.)) (صححه إبن ماجة)**

ಸಲ್ಮಾನ್ ಇಬ್ನ್ ಆಮಿರ್ ಅದ್ದಬಿಯ್ಯಿ(ﷺ)ರವರಿಂದ ವರದಿ: ರಸೂಲುಲ್ಲಾಹಿ(ﷺ)ರವರು ನುಡಿದರು: "ಬಡವರಿಗೆ ಕೊಡುವ ದಾನ ಸ್ವದಖ ಆಗಿದೆ. ನಿಕಟ ಸಂಬಂಧಿಕರಿಗೆ ಕೊಡುವ ದಾನವು ದ್ವಿಪ್ರತಿಫಲವಿರುವುದಾಗಿದೆ. ಒಂದು: ಸ್ವದಖ ಇನ್ನೊಂದು ಕುಟುಂಬ ಸಂಬಂಧವನ್ನು ಸೇರಿಸುವುದು."(ಇಬ್ನ್ ಮಾಜಃ)

ಮೇಲಿರುವ ಕೈ...

ಅಲ್ಲಾಹನು ನೀಡಿರುವ ಅವನ ಅನುಗ್ರಹವಾದ ಸಂಪತ್ತನ್ನು ಇಸ್ಲಾಮಿನ ಮಾರ್ಗದಲ್ಲಿ ಖರ್ಚು ಮಾಡುವುದು ತುಂಬಾ ಪುಣ್ಯವಿರುವ ಕರ್ಮವಾಗಿದೆ. ಹಾಗೆ ಖರ್ಚು ಮಾಡುವ ಮೇಲಿನ ಕೈ ಅದನ್ನು ಪಡೆಯುವ ಕೆಳಗಿನ ಕೈಗಿಂತ ಉತ್ತಮವು, ಪ್ರತಿಫಲಾರ್ಹವು ಆಗಿದೆ. ಒಂದು ಹದೀಸನ್ನು ಗಮನಿಸಿರಿ:

**((عن عبد اللهِ بن عمر ، رضي الله عنهما أن رسولَ اللهِ صلى الله عليه وسلم قَالَ : وهو على المنبرِ وذَكَر الصدقَةَ والتعفف والمسألةَ اليد العليا خير من اليد السفْلَى فَاليد العليا هي المنفقَةُ والسفْلَى هي السائلَةُ.)) (بخاري)**

ಇಬ್ನ್ ಉಮರ್(﵄)ರವರಿಂದ ವರದಿ: ಪ್ರವಾದಿ(ﷺ)ರವರು ಮಿಂಬರಿನಲ್ಲಿದ್ದಾಗ ಅವರು ಹೇಳುವುದನ್ನು ನಾನು ಆಲಿಸಿದ್ದೇನೆ: ಅವರು ಸ್ವದಖದ ಕುರಿತೂ, ಚಾರಿತ್ರ್ಯತೆಯ ಕುರಿತೂ ಹೇಳಿದರು, ಹಾಗೆಯೇ ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವೆಂಬ ವಿಷಯವನ್ನೂ ಹೇಳಿದರು. ಮೇಲಿನ ಕೈ ಎಂದರೆ ಖರ್ಚು ಮಾಡುವ ಕೈ, ಕೆಳಗಿನ ಕೈ ಎಂದರೆ ಬೇಡುವ ಕೈಯಾಗಿದೆ"(ಬುಖಾರಿ)

<u>ವಿಚಾರಣೆ ನಡೆಯಲಿದೆ.</u>

ಇಸ್ಲಾಮಿನ ಮಾರ್ಗದಲ್ಲಿ ಖರ್ಚು ಮಾಡುವುದು ತುಂಬಾ ಪ್ರಾಮುಖ್ಯತೆಯಿರುವ ವಿಷಯವಾಗಿದೆ. ದಅವತ್ ಪ್ರತಿಯೋರ್ವ ಮುಸ್ಲಿಮನ ಮೇಲಿರುವ ಬಾಧ್ಯತೆಯಾಗಿದೆ, ಪ್ರತಿಯೋರ್ವ ವ್ಯಕ್ತಿಯೂ ಅವರವರ ಸಾಮರ್ಥ್ಯಕ್ಕನುಸಾರವಾಗಿ ದಅವತ್ ಮಾಡಬೇಕಾಗಿದೆ. ಸಂಪತ್ತು ಇರುವವರು ದಅವಾ ಚಟುವಟಿಕೆಗಳಿಗೆ ಬೇಕಾದ ಸಹಾಯವನ್ನು ಮಾಡುವುದು, ದಅವತ್ ಮಾಡುವವರಿಗೆ ಸಹಾಯ ಮಾಡುವುದು ಎಂಬಿತ್ಯಾದಿ ಕಾರ್ಯಗಳನ್ನು ಮಾಡುತ್ತಾ ಧನಿಕರು ಅವರ ಬಾಧ್ಯತೆಯನ್ನು ನಿರ್ವಹಿಸ ಬೇಕಾದುದು ಅನಿವಾರ್ಯವಾಗಿದೆ.

ಪರಲೋಕದಲ್ಲಿ; ಎಲ್ಲಿಂದ ದನ ಸಂಪಾದಿಸಿದೆ, ಹೇಗೆ ಖರ್ಚು ಮಾಡಿದೆ ಎಂಬ ಪ್ರಶ್ನೆಗೆ ವ್ಯಕ್ತವಾದ ಉತ್ತರವನ್ನು ನೀಡದೆ ಯಾರೊಬ್ಬರಿಗೂ ತನ್ನ ಕಾಲಿನ ಒಂದು ಹೆಜ್ಜೆಯನ್ನೂ ಮುಂದಿಡಲು ಸಾಧ್ಯವಿಲ್ಲ. ಒಂದು ಹದೀಸನ್ನು ನೋಡಿರಿ:

**((لاَ تزولُ قَدما عبد يوم الْقيامة حتى يسألَ : عن عمره فيما أَفْنَاه، وعن علْمه فيم فَعلَ، وعن ماله من أين اكْتسبه وفيما أنفَقَه، وعن جِسمه فيم أَبلاَه))**

ಅಬೂ ಬರ್‌ಝ ಅಲ್ ಅಸ್‌ಲಮಿ(﵁)ರವರಿಂದ ವರದಿ: ರಸೂಲಿಲ್ಲಾಹಿ(ﷺ)ರವರು ಹೇಳಿದರು: 'ಅಂತ್ಯ ದಿನದಂದು (ನಾಲ್ಕು ಪ್ರಶ್ನೆಯನ್ನು ಕೇಳಿ ಅದಕ್ಕೆ ಉತ್ತರಿಸುವ ವರೆಗೆ) ಯಾರೊಬ್ಬರಿಗೂ ತನ್ನ ಕಾಲನ್ನು ಮುಂದಿಡಲು ಸಾಧ್ಯವಿಲ್ಲ, (ಅವುಗಳು): ತನ್ನ ವಯಸ್ಸನ್ನು ಯಾಕಾಗಿ ವ್ಯಯಿಸಿದೆ, ತನ್ನ ಜ್ಞಾನ(ಇಲ್ಮ್)ದಿಂದ ಏನು ಮಾಡಿದೆ, ತನ್ನ ಸಂಪತ್ತನ್ನು ಹೇಗೆ ಸಾಂಪದಿಸಿದೆ ಮತ್ತು ಯಾವುದಕ್ಕೆ ಖರ್ಚು ಮಾಡಿದೆ ಹಾಗೂ ತನ್ನ ಶರೀರವನ್ನು ಯಾವುದಕ್ಕಾಗಿ ಉಪಯೋಗಿಸಿದೆ"(ತಿರ್ಮಿದಿ)

ಅಲ್ಲಾಹನ ಮಾರ್ಗದಲ್ಲಿ ಸ್ವದಖ(ದಾನ) ನೀಡುವವರ ಉಪಮೆಯನ್ನು ನೋಡಿರಿ:

**مثَلُ الذين ينفقُونَ أموالَهم في سبِيلِ الله كَمثَلِ حبة أنبتت سبع سنابِلَ في كُلِ سنبلَة مائَةُ حبة والله يضاعف لمن يشاءُ والله واسع عليم ([البقرة:٢٦١)**

"ಅಲ್ಲಾಹುವಿನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ವ್ಯಯಿಸುವವರನ್ನು ಒಂದು ಧಾನ್ಯಕ್ಕೆ ಹೋಲಿಸಬಹುದು. ಅದು ಏಳು ತೆನೆಗಳನ್ನು ಉತ್ಪಾದಿಸಿತು. ಪ್ರತಿಯೊಂದು ತೆನೆಯಲ್ಲೂ ನೂರು ಧಾನ್ಯಗಳಿವೆ. ಅಲ್ಲಾಹು ತಾನಿಚ್ಛಿಸುವವರಿಗೆ ಇಮ್ಮಡಿಯಾಗಿ ಕೊಡುವನು. ಅಲ್ಲಾಹು ವಿಶಾಲನೂ, (ಸರ್ವವನ್ನೂ) ಅರಿಯುವವನೂ ಆಗಿರುವನು."(ಅಲ್ ಬಕರ:261)

✍ ಸಯ್ಯಿದ್ ಸಅಫರ್ ಸ್ವಾದಿಖ್

ಅನುವಾದ: ಅಬ್ದುಲ್ ಮಜೀದ್ ಎಸ್.ಎಮ್

ಪ್ರಕಟಣೆ

ಕರ್ನಾಟಕ ಸಲಫಿ ಅಸೋಸಿಯೇಷನ್ ದಮ್ಮಾಮ್–ಖೋಬರ್ ಘಟಕ

☎ 03 8980984, ✆ 0567388901, 0508831878, 0502802136

**ಪವಿತ್ರ ಸಂದೇಶ ಪಾಕ್ಷಿಕ, ಸತ್ಯ ಸಾರಥಿ ಮಾಸಿಕ, ಟ್ರೂ ವಿಶನ್ ಮಾಸಿಕ ಮತ್ತು ಸಲಫಿ ಆದರ್ಶದ ಪುಸ್ತಕ, ಸಿ.ಡಿ,ಡಿ.ವಿ.ಡಿಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ:**